ವಿ ಸಿ ನಂ. 139/2021

ಪಿ ಡಬ್ಲ್ಯೂಃ 1

ದಿನಾಂಕ 24/12/2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ **1** ಮತ್ತು **2** ನೇ ಎದುರುದಾರರ ಪರಃ ಶ್ರೀ ಸಿ ಬಿ ವಕೀಲರಿಂದಃ</u>

ನನ್ನ ತಂದೆ ದಿನಾಂಕ **13/01/2020** ರಂದು ಅಪಘಾತದಲ್ಲಿ ಮೃತ ಪಟ್ಟಿರುತ್ತಾರೆ. ಆ ದಿನ ಸೋಮವಾರ ಆಗಿದ್ದು, ಕಡೂರು ಸಂತೆ ಇರುತ್ತದೆ ಎಂದರೆ ಸರಿ. ಆದ್ದರಿಂದ ಸದರಿ ದಿನ ಕಡೂರು ನಗರದಲ್ಲಿ ಮರವಂಜಿ ಸರ್ಕಲ್ ನಿಂದ ಎ ಪಿ ಎಂ ಸಿ ಮಾರ್ಕೆಟ್ ವರೆಗೆ ಹೆಚ್ಚಿನ ಜನ ಸಂದಣಿ ಮತ್ತು ವಾಹನ ದಟ್ಟನೆ ಇರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸ್ನೇಹಪ್ರಿಯ ಪತ್ರಿಕೆಯ ಕಚೇರಿ ಕಡೂರು ಪೋಲೀಸ್ ಠಾಣೆಯ ಪಕ್ಕದಲ್ಲಿ ಬರುತ್ತದೆ ಎಂದರೆ ಸರಿ. ಅಪಘಾತ ಪಡಿಸಿದ ವಾಹನ ಯಾವುದು ಎಂದರೆ ಸಾಕ್ಷಿ ಅದು ವಾಹನದ ಚಾರ್ಸಿ ಮಾತ್ರ ಆಗಿದ್ದು ಅದು ಲಾರಿಯದ್ದೊ ಬಸ್ಸಿನದೋ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಅರ್ಜಿಯಲ್ಲಿ ಸದರಿ ವಾಹನದ ಬಗ್ಗ ನಿಖರವಾಗಿ ಹೇಳಿದ್ದೇನೋ ಇಲ್ಲವೋ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಸಂತೆ ಇದ್ದ ದಿನ ಜನ ಸಂದಣಿ ಹೆಚ್ಚಾಗಿದ್ದು ವಾಹನಗಳ ಸಂಚಾರ ಸಹ ಹೆಚ್ಚು ಇದ್ದು ಯಾವುದೇ ವಾಹನಗಳು ಸುಮಾರು **15-20** ಕಿ ಮೀ ಪ್ರತಿ ಗಂಟೆ ವೇಗದಲ್ಲಿ ಮಾತ್ರ ಚಾಲನೆ ಮಾಡುತ್ತಾರೆ ಎಂದರೆ ಸಾಕ್ಷಿ ಜನ ಸಂದಣಿ ಇಲ್ಲದಿದ್ದಾಗ ವೇಗವಾಗಿ ಹೋಗುತ್ತಾರೆ ಎಂದು ನುಡಿಯುತ್ತಾರೆ.

ಅಪಘಾತವಾದ ಸಮಯದಲ್ಲಿ ಅಪಘಾತ ಪಡಿಸಿದ ವಾಹನ ಕೆಎ-2020 ಟಿ/ಆರ್-8732 ವಾಹನಕ್ಕೆ ವಿಮೆ ಚಾಲ್ತಿಯಲ್ಲಿದ್ದು ಅದರ ಚಾಲಕರಾದ 1ನೇ ಎದುರುದಾರರಿಗೆ ಚಾಲನಾ ಪರವಾನಿಗಿ ಸಹ ಚಾಲ್ತಿಯಲ್ಲಿತ್ತು ಎಂದರೆ ಸರಿ. ಆದ ಕಾರಣ 3ನೇ ಎದುರುದಾರರು ನಮಗೆ ಪರಿಹಾರ ನೀಡಲು ಬಾದ್ಯರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. 1ನೇ ಎದುರುದಾರರ ಅತೀವೇಗ ಮತ್ತು ಅಜಾಗರೂಕತೆಯಿಂದ ಅಪಘಾತವಾಗಿಲ್ಲ, ನನ್ನ ತಂದೆಯೇ ಅತೀವೇಗವಾಗಿತನ್ನ ದ್ವಿಚಕ್ರ ವಾಹನವನ್ನು ಚಾಲನೆ ಮಾಡಿಕೊಂಡು ಸದರಿ ಚಾರ್ಸಿಯ ಹಿಂಬದಿಗೆ ಗುದ್ದಿ ಮೃತ ಪಟ್ಟಿರುತ್ತಾರೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ೩ನೇ ಎದುರುದಾರರ ಪರಃ ಶ್ರೀ ಸಿ ಎಸ್ ಎಸ್ ವಕೀಲರಿಂದಃ</u>

ಅಪಘಾತವನ್ನು ನಾನು ನೋಡಿರುವುದಿಲ್ಲ ಎಂದರೆ ಸರಿ. ಆದ್ದರಿಂದ ಅಪಘಾತ ಹೇಗೆ ಆಗಿದೆ ಎಂಬುದರ ಬಗ್ಗೆ ನನಗೆ ಖುದ್ದಾಗಿ ಮಾವುಹಿತಿ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಕೇಳಿ ತಿಳಿದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಕುಟುಂಬದ ಕಡೆಯಿಂದ ಅಪಘಾತದ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ. ನನ್ನ ತಂದೆ ಮೃತ ಕುಮಾರ್ ರವರು ಕಲ್ಲಿನ ವ್ಯಾಪಾರಿ ಆಗಿದ್ದರು. ಅವರು ಕಲ್ಲಿನ ವ್ಯಾಪಾರ ಮಾಡುತ್ತಿದ್ದರು ಎಂದು ತೋರಿಸಲು ದಾಖಲೆಗಳು ಏನಾದರೂ ಇದೆಯಾ ಎಂದರೆ ಸಾಕ್ಷಿ ದಾಖಲೆಗಳು ಇಲ್ಲ ಆದರೆ ಅವರು ದಲ್ಲಾಲಿ

ರೀತಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಆ ರೀತಿ ದಲ್ಲಾಲಿಯಾಗಿ ಕೆಲಸ ಮಾಡುತ್ತಿದ್ದ ಬಗ್ಗೆ ಪರವಾನಿಗಿ ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಆದಾಯ ತೆರಿಗೆ ಪಾವತಿ ಮಾಡುತ್ತಿದ್ದರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆ ತೆರಿಗೆ ಪಾವತಿ ಮಾಡಿದ ಬಾಬ್ತು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಮೃತ ಕುಮಾರ್ ರವರ ವಾರಸುದಾರರು ಯಾರು ಯಾರು ತೋರಿಸಲು ದಾಖಲೆ ಇದೆಯಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಾನು ವಂಶವೃಕ್ಷವನ್ನು ನಿಪಿ-12 ರಂತೆ ಹಾಜರುಪಡಿಸಿರುತ್ತೇನೆ. ನನ್ನ ತಂದೆಯಾದ ಮೃತ ಕುಮಾರ್ ರವರ ತಂದೆ ತಾಯಿಗಳು ಜೀವಂತ ಇಲ್ಲ. ನನ್ನ ತಂದೆಗೆ ನಾನು ಮತ್ತು ಸುಧಾಕರ್ ಇಬ್ಬರೇ ಮಕ್ಕಳಾಗಿರುತ್ತೇವೆ. ನಾವಿಬ್ಬರು ನೌಕರಿಯಲ್ಲಿದ್ದೇವೆ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಾನು ಖಾಸಗಿ ಉದ್ಯೋಗಿಯಾಗಿರುತ್ತೇನೆ ಎಂದು ತಿಳಿಸಿರುವ ವಿಚಾರ ಸುಳ್ಳು ಎಂದರೆ ಸಾಕ್ಷಿ ಇಲ್ಲ ನಾನು ಖಾಸಗಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದು, ನನ್ನ ತಮ್ಮ ಯಾವುದೇ ಕೆಲಸ ಮಾಡುತ್ತಿಲ್ಲ ಎಂದು ನುಡಿಯುತ್ತಾರೆ.

ಕೆಎ-18 ಯು-4674 ರ ದ್ವಿಚಕ್ರ ವಾಹನ ನನ್ನ ತಂದೆಗೆ ಸೇರಿದ್ದಾಗಿರುತ್ತದೆ. ನನ್ನ ತಂದೆಗೆ ದ್ವಿಚಕ್ರ ವಾಹನ ಚಾಲನೆ ಮಾಡಲು ಚಾಲನಾ ಪರವಾನಿಗಿ ಇತ್ತು. ಸದರಿ ಪರವಾನಿಗಿಯನ್ನು ನಾನು

ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನನ್ನ ತಂದೆ ಪರವಾನಿಗಿಯನ್ನು ಹೊಂದಿದ್ದರು ಎಂದು ಹೇಳುತ್ತಿದ್ದರು ಆದರೆ ಅದನ್ನು ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಯ ಬಳಿ ಚಾಲನಾ ಪರವಾನಿಗಿ ಇದ್ದ ಬಗ್ಗ ನನ್ನ ತಾಯಿಗೆ ತಿಳಿದಿದೆಯಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅಪಘಾತದ ನಂತರ ಪೋಲೀಸರ ಮುಂದೆ ಹೇಳಿಕೆ ನೀಡುವ ಸಮಯದಲ್ಲಿ ನನ್ನ ತಂದೆ ದ್ವಿಚಕ್ರ ವಾಹನ ಚಾಲನಾ ಪರವಾನಿಗಿ ಹೊಂದಿದ್ದರು ಎಂಬ ವಿಚಾರ ತಿಳಿಸಿಲ್ಲವಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅಪಘಾತವಾದ ಸ್ಥಳದಲ್ಲಿ ವಾಹನ ದಟ್ಟನೆ ಹೆಚ್ಚಾಗಿ ಇರುತ್ತದೆ ಎಂದರೆ ಸಾಕ್ಷಿ ಸಾಮಾನ್ಯವಾಗಿ ಇರಬಹುದು ಅಥವಾ ಇಲ್ಲದೆ ಸಹ ಇರಬಹುದು ಎಂದು ನುಡಿಯುತ್ತಾರೆ. ಅಪಘಾತ ಪಡಿಸಿದ ಚಾರ್ಸಿ ತಾತ್ಕಾಲಿಕ ಅನುಮೋದನೆ ಹೊಂದಿತ್ತು ಎಂದರೆ ಸರಿ. ತಾತ್ಕಾಲಿಕ ಅನುಮೋದನೆಯಲ್ಲಿ (ಟೆಂಪರರಿ ಪರ್ಮಿಟ್) ಯಾವ ಸ್ಥಳದಿಂದ ಯಾವ ಸ್ಥಳಕ್ಕೆ ಹೋಗಬೇಕು ಎಂಬ ಬಗ್ಗ ನಿಬಂಧನೆ ಇರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅಪಘಾತ ಪಡಿಸಿದ ಚಾರ್ಸಿ ವಾಹನಕ್ಕೆ ಕಡೂರಿನಲ್ಲಿ ಚಾಲನೆ ಮಾಡಲು ತಾತ್ಕಾಲಿಕ ಅನುಮೋದನೆ ಇರಲಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಕೇವಲ ಚಾರ್ಸಿ ಹೊಂದಿರುವ ವಾಹನಕ್ಕೆ ಕೇವಲ ಡ್ರೈವರ್ ಕ್ಯಾಬೀನ್ ಮಾತ್ರ ಇದ್ದು ಖಾಲಿ ಇರುತ್ತದೆ ಎಂದರೆ ಸರಿ. ಖಾಲಿ ಇದ್ದ ಕಾರಣದಿಂದ ಅತೀವೇಗವಾಗಿ ಸದರಿ ವಾಹನವನ್ನು ಚಾಲನೆ ಮಾಡಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ.

ನನ್ನ ತಂದೆಯವರೇ ಹೋಗುತ್ತಿದ್ದ ಸದರಿ ಚಾರ್ಸಿ ವಾಹವನ್ನು ಗಮನಿಸದೆ ಹಿಂದೆಯಿಂದ ಅಪಘಾತ ಉಂಟು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಚಾರ್ಸಿ ವಾಹನದ ಮುಂಭಾಗದ ಚಕ್ರ ನನ್ನ ತಂದೆಯ ತಲೆಯ ಮೇಲೆ ಹರಿದು ಹೋಗಿದೆ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಬರೆಸಿರುವುದು ಸುಳ್ಳು ಎಂದರೆ ಸಾಕ್ಷಿ ನನ್ನ ತಂದೆಯ ಎದೆಯ ಮೇಲೆ ಹರಿದಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಅಪಘಾತವು 1 ನೇ ಎದುರುದಾರರ ತಪ್ಪಿನಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಅಂತ್ಯಕ್ರಿಯೆಗೆ 1 ಲಕ್ಷ ರೂ ಖರ್ಚಾಗಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಜೀವಂತ ಇದ್ದಾಗ ಮಾಸಿಕ 70 ಸಾವಿರ ರೂ ಆದಾಯ ಗಳಿಸುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ನನ್ನ ತಂದೆ ಮೃತ ಪಟ್ಟ ನಂತರದಲ್ಲಿ ಕೆಲಸಕ್ಕೆ ಸೇರಿರುತ್ತೇನೆ. ಅರ್ಜಿಯಲ್ಲಿ ನಾನು ಕೇಳಿರುವ ಪರಿಹಾರಕ್ಕೂ ನನ್ನ ತಂದೆಯ ಆದಾಯಕ್ಕೂ ಹೊಂದಾಣಿಕೆ ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ತಪ್ಪಿನಿಂದಲೇ ಅಪಘಾತವಾಗಿರುವುದರಿಂದ 3 ನೇ ಎದುರುದಾರರು ಯಾವುದೇ ಪರಿಹಾರ ನೀಡಲು ಬಾದ್ಯರಲ್ಲ ಎಂದರೆ ಸರಿಯಲ್ಲ. ಅಪಘಾತವಾದ ದಿನ ನನ್ನ ತಂದೆ ಚಾಲನೆ ಮಾಡುತ್ತಿದ್ದ ಕೆಎ-18 ಯು-4674 ರ ದ್ವಿಚಕ್ರ ವಾಹನಕ್ಕೆ ವಿಮೆ ಚಾಲಿಪ್ತಿಯಲ್ಲಿತ್ತು. ಸದರಿ ವಿಮಾ ಕಂಪನಿಯವರನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. 1 ನೇ

MVC 139/2021 PW1

ಎದುರುದಾರರಿಗೆ ಚಾರ್ಸಿ ಬಸ್ಸನ್ನು ಚಾಲನೆ ಮಾಡಲು ಚಾಲನಾ ಪರವಾನಿಗಿ ಇರಲಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.